ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೦

# ಕರ್ನಾಟಕ ವಿಧಾನಸಭೆ

## ಹದಿನಾಲ್ಕನೇ ವಿಧಾನಸಭೆ

## ಹತ್ತನೇ ಅಧಿವೇಶನ

## ಸೋಮವಾರ, ದಿನಾಂಕ: ೧೮ನೇ ಜುಲೈ, ೨೦೧೬

---

## ಸಮೂಹ – 'ಅ - A'

೧. ಮಾನ್ಯ ಅರಣ್ಯ ಸಚಿವರು

೨. ಮಾನ್ಯ ಕಂದಾಯ ಸಚಿವರು

೩. ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು

೫. ಮಾನ್ಯ ಕಾರ್ಮಿಕ ಸಚಿವರು

೬. ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು

೭. ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

---

## ನಬಾರ್ಡ್ ಯೋಜನೆ

**ಶ್ರೀ ಗುರುಪಾಟೀಲ ಶಿರವಾಳ (ಶಹಾಪುರ)–**

೧೩೬ (೩೩೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನಬಾರ್ಡ್ ಯೋಜನೆಯಡಿ ಕಳೆದ ಮೂರು ವರ್ಷಗಳಿಂದ ೨೦೧೬ರ ಜೂನ್ ಅಂತ್ಯದವರೆಗೆ ಸರ್ಕಾರ ಮೀಸಲಿರಿಸಿದ, ಬಿಡುಗಡೆಯಾದ ಮತ್ತು ಖರ್ಚು ಮಾಡಿದ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಮೇಲ್ಕಂಡ ಅವಧಿಯಲ್ಲಿ ಈ ಯೋಜನೆಯಡಿ ಸಣ್ಣ ನೀರಾವರಿ ಇಲಾಖೆಯು ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳು ಯಾವುವು ; (ವಾರ್ಷಿಕವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಇ) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಿರುವ ತಾಲ್ಲೂಕುಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಕೇಂದ್ರ ಸರ್ಕಾರದ ಅನುದಾನ

**ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ)–**

೧೩೭ (೯೫೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಮೂರು ವರ್ಷಗಳಿಂದ ಅರಣ್ಯ ಮತ್ತು ಪರಿಸರ ಇಲಾಖೆಗೆ ಕೇಂದ್ರ ಸರ್ಕಾರದಿಂದ ಹಂಚಿಕೆಯಾಗಿರುವ ಅನುದಾನವೆಷ್ಟು ; (ವರ್ಷವಾರು ಮತ್ತು ಯೋಜನಾವಾರು ಹಂಚಿಕೆ ಮಾಡಲಾಗಿರುವ ಅನುದಾನದ ಸಂಪೂರ್ಣ ವಿವರ ಒದಗಿಸುವುದು)

(ಆ) ಈ ಅನುದಾನದಲ್ಲಿ ಕಳೆದ ೩ ವರ್ಷಗಳಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; ಈ ಯೋಜನೆಗಳಿಗೆ ಖರ್ಚು ಮಾಡಿರುವ ಅನುದಾನವೆಷ್ಟು ; (ಯೋಜನಾವಾರು, ಜಿಲ್ಲಾವಾರು ಹಾಗೂ ಕ್ಷೇತ್ರವಾರು ಹಂಚಿಕೆ ಮಾಡಿರುವ ಅನುದಾನದ ಪೂರ್ಣ ವಿವರ ಒದಗಿಸುವುದು)

(ಇ) ಈ ಯೋಜನೆಗಳ ಪೈಕಿ ಪೂರ್ಣಗೊಂಡಿರುವ ಯೋಜನೆಗಳೆಷ್ಟು ; ವಿಫಲಗೊಂಡಿರುವ ಯೋಜನೆಗಳೆಷ್ಟು ; ಯೋಜನೆಗಳು ವಿಫಲಗೊಳ್ಳಲು ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ಜಿಲ್ಲಾ ಕಛೇರಿಗಳ ಸಂಕೀರ್ಣ

**ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ (ಯಮಕನಮರಡಿ)–**

೧೩೮ (೧೨೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಎಲ್ಲಾ ಜಿಲ್ಲಾ ಕಛೇರಿಗಳನ್ನು ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಇದು ಯಾವ ಹಂತದಲ್ಲಿದೆ ; ಕಟ್ಟಡಗಳ ಸಂಕೀರ್ಣವನ್ನು ಪೂರ್ಣಗೊಳಿಸಲು ಬೇಕಾಗುವ ಅನುದಾನ ಮತ್ತು ಕಾಲಾವಕಾಶ ಎಷ್ಟು ? (ಮಾಹಿತಿ ಒದಗಿಸುವುದು)

## ಸರ್ಕಾರಿ ಜಮೀನುಗಳು

**ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)–**

೧೩೯ (೨೧೪೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಜಮೀನುಗಳನ್ನು ಗುರುತಿಸಲಾಗಿದೆಯೇ ;

(ಆ) ಗುರುತಿಸಿದ್ದಲ್ಲಿ, ಒತ್ತುವರಿಯಾಗಿರುವ ಜಮೀನುಗಳು ಯಾವುವು ; (ವಿವರ ನೀಡುವುದು)

(ಇ) ಈ ಒತ್ತುವರಿಯನ್ನು ತೆರವುಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? (ಒತ್ತುವರಿಯನ್ನು ತೆರವುಗೊಳಿಸಿರುವ ಜಮೀನಿನ ವಿವರ ನೀಡುವುದು)

## ೭೯AB ಪ್ರಕರಣಗಳು

**ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)–**

೧೪೦ (೨೩೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಗಳ ಕಛೇರಿಯಲ್ಲಿ ೨೦೧೪–೧೫, ೨೦೧೫–೧೬ನೇ ಸಾಲಿನಲ್ಲಿ ದಾಖಲಾದ ೭೯AB ಪ್ರಕರಣಗಳೆಷ್ಟು ; ಇದರಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳೆಷ್ಟು ;

(ಆ) ಈ ವರ್ಷದಲ್ಲಿ ದಾಖಲಾದ ೭೯AB ಪ್ರಕರಣಗಳೆಷ್ಟು ; ಈ ಪೈಕಿ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳೆಷ್ಟು ;

(ಇ) ಈ ಕ್ಷೇತ್ರದಲ್ಲಿನ ಬಗರ್ ಹುಕುಂ ಸಾಗುವಳಿದಾರ ಫಲಾನುಭವಿಗಳ ಸಂಖ್ಯೆ ಎಷ್ಟು ; ಕಳೆದ ಮೂರು ವರ್ಷಗಳಲ್ಲಿ ಬಗರ್ ಹುಕುಂ ಸಾಗುವಳಿಗೆ ಸಂಬಂಧಿಸಿದಂತೆ ನಡೆಸಿರುವ ಸಭೆಗಳೆಷ್ಟು ; ಈ ಸಭೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಮಂಜೂರಾತಿ ದೊರಕಿಸಿಕೊಡಲಾಗಿದೆ ; (ವಿವರ ನೀಡುವುದು)

(ಈ) ನೆಲಮಂಗಲ ತಾಲ್ಲೂಕು ಕಛೇರಿಯಿಂದ ದಾಖಲಾಗಿರುವ ೭೯AB ಪ್ರಕರಣಗಳ ಸಂಖ್ಯೆ ಎಷ್ಟು ; ಕಳೆದ ಮೂರು ವರ್ಷಗಳಲ್ಲಿ ಇತ್ಯರ್ಥವಾದ ಪ್ರಕರಣಗಳೆಷ್ಟು ; ಬಾಕಿ ಇರುವ ಪ್ರಕರಣಗಳೆಷ್ಟು ? (ವಿವರ ನೀಡುವುದು)

## ದೇವಸ್ಥಾನಗಳ ಅನುದಾನ ಬಾಕಿಯಿರುವುದು

**ಶ್ರೀ ನರೇಂದ್ರಸ್ವಾಮಿ ಪಿ.ಎಂ. (ಮಳವಳ್ಳಿ)–**

೧೪೧ (೧೨೧೨) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳ ಅವಧಿಯಲ್ಲಿ ಮಳವಳ್ಳಿ ತಾಲ್ಲೂಕಿನ ವಿವಿಧ ದೇವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ವಿಶೇಷ ಅನುದಾನ ರೂ. ೧೫೦.೦೦ ಲಕ್ಷಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಂಜೂರಾದ ಅನುದಾನದಲ್ಲಿ ಇದುವರೆವಿಗೂ ಬಿಡುಗಡೆಯಾಗಿರುವ ಅನುದಾನವೆಷ್ಟು ; ಈ ಅನುದಾನವನ್ನು ಸಂಪೂರ್ಣವಾಗಿ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆಯೇ ; ಕಾಮಗಾರಿಗಳು ಸಂಪೂರ್ಣವಾಗಿ ಮುಗಿದಿವೆಯೇ ; (ವಿವರ ನೀಡುವುದು)

(ಇ) ಕಾಮಗಾರಿಗಳು ಸಂಪೂರ್ಣವಾಗಿ ಮುಗಿದಿದ್ದರೂ, ಇಲ್ಲಿಯವರೆಗೂ ಬಾಕಿ ಅನುದಾನವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅನುದಾನ ಬಿಡುಗಡೆ ಮಾಡದಿರಲು ಕಾರಣಗಳೇನು ;

(ಈ) ಬಾಕಿ ಅನುದಾನವನ್ನು ಬಿಡುಗಡೆ ಮಾಡುವ ಸಂಬಂಧ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಈ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ ; ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಬದ್ಧವಿದೆಯೇ ?

## ಮಿನಿ ವಿಧಾನಸೌಧ ನಿರ್ಮಾಣ

**ಶ್ರೀಮತಿ ಶಾರದಾ ಮೋಹನ ಶೆಟ್ಟಿ (ಕುಮಟಾ)–**

೧೪೨ (೨೧೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕುಮಟಾ ತಾಲ್ಲೂಕಿನ ಕುಮಟಾದಲ್ಲಿ ಮಿನಿ ವಿಧಾನಸೌಧ ಕಟ್ಟಡ ಮಂಜೂರಾಗಿದ್ದು, ಅನುದಾನ ಬಿಡುಗಡೆಯಾಗದೇ ಯಾವುದೇ ಪ್ರಗತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅನುದಾನ ಬಿಡುಗಡೆಯಾಗದಿರಲು ಕಾರಣವೇನು ; ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು ;

(ಇ) ಕಟ್ಟಡಕ್ಕೆ ಅವಶ್ಯವಿರುವ ಭೂಮಿಯನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಮಿನಿ ವಿಧಾನ ಸೌಧ ನಿರ್ಮಾಣ

**ಶ್ರೀ ನಾಗೇಂದ್ರ ಬಿ. (ಕೂಡ್ಲಿಗಿ)–**

೧೪೩ (೨೩೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣಕ್ಕೆ ಮಂಜೂರು ಮಾಡಿರುವ ಅನುದಾನ ಎಷ್ಟು ; (ತಾಲ್ಲೂಕುವಾರು ಮತ್ತು ವರ್ಷವಾರು ವಿವರ ನೀಡುವುದು)

(ಆ) ಕೂಡ್ಲಿಗಿಯಲ್ಲಿ ಮಿನಿ ವಿಧಾನ ಸೌಧ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ಕೂಡ್ಲಿಗಿಯಲ್ಲಿ ಮಿನಿ ವಿಧಾನ ಸೌಧ ನಿರ್ಮಿಸಲು ಅನುದಾನ ಮಂಜೂರು ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ? (ವಿವರ ನೀಡುವುದು)

## ಅರಣ್ಯ ಹಕ್ಕು ಕಾಯಿದೆ

**ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)–**

೧೪೪ (೧೧೭೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯಿದೆಯಡಿ ಭೂ ಮಂಜೂರಾತಿ ಕೋರಿ ಈವರೆಗೆ ಅರಣ್ಯ ಹಕ್ಕು ಸಮಿತಿಗಳ ಮುಂದೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಪೈಕಿ ಈವರೆಗೆ ಎಷ್ಟು ಗಿರಿಜನ ಮತ್ತು ಇತರೆ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕು ಕಾಯಿದೆಯಡಿ ಹಕ್ಕು ಪತ್ರಗಳನ್ನು ನೀಡಲಾಗಿದೆ ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ವಿಲೇವಾರಿಗಾಗಿ ಇನ್ನು ಬಾಕಿ ಉಳಿದಿರುವ ಅರ್ಜಿಗಳೆಷ್ಟು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

## ವೈದ್ಯಕೀಯ ಸೌಲಭ್ಯ

**ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)–**

೧೪೫ (೯೫೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳು ಇ.ಎಸ್.ಐ. ಯೋಜನೆಯಡಿಯಲ್ಲಿ ವೈದ್ಯಕೀಯ ಸೌಲಭ್ಯ ಪಡೆಯಲು ಆದೇಶ ಹೊರಡಿಸಲಾಗಿದೆಯೇ ; ಹಾಗಿದ್ದಲ್ಲಿ, ಯಾವಾಗ ಆದೇಶ ಹೊರಡಿಸಲಾಗಿದೆ ; (ಪ್ರತಿ ಒದಗಿಸುವುದು)

(ಆ) ಇಲ್ಲಿಯವರೆಗೆ ಎಷ್ಟು ಶಿಕ್ಷಣ ಸಂಸ್ಥೆಗಳು ಈ ಯೋಜನೆಯಡಿಯಲ್ಲಿ ವೈದ್ಯಕೀಯ ಸೌಲಭ್ಯ ಪಡೆಯಲು ಸರ್ಕಾರದೊಂದಿಗೆ ನೋಂದಾವಣೆ ಮಾಡಿಕೊಂಡಿವೆ ; ಅವು ಯಾವುವು ; (ಪೂರ್ಣ ವಿವರ ನೀಡುವುದು)

(ಇ) ನೋಂದಾವಣೆ ಮಾಡಿಕೊಂಡಿಲ್ಲದ ಶಿಕ್ಷಣ ಸಂಸ್ಥೆಗಳು ಯಾವುವು ? (ಮಾಹಿತಿ ನೀಡುವುದು)

## ಪ್ಲಾಸ್ಟಿಕ್ ನಿಷೇಧ

**ಶ್ರೀ ನಾರಾಯಣಸ್ವಾಮಿ ವೈ.ಎ. (ಹೆಬ್ಬಾಳ)–**

೧೪೬ (೧೮೪೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ಲಾಸ್ಟಿಕ್ ನಿಷೇಧ ರಾಜ್ಯದಲ್ಲಿ ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ, ಜಾರಿಗೆ ಬಂದಿದ್ದು ಯಾವಾಗ ; (ಆದೇಶದ ಪ್ರತಿ ಒದಗಿಸುವುದು)

(ಆ) ಪ್ಲಾಸ್ಟಿಕ್ ನಿಷೇಧವನ್ನು ಕಡ್ಡಾಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಇದುವರೆವಿಗೂ ಪ್ಲಾಸ್ಟಿಕ್ ನಿಷೇಧದ ಆಜ್ಞೆಯನ್ನು ಉಲ್ಲಂಘಿಸಿರುವವರ ವಿರುದ್ಧ ದಾಖಲಾಗಿರುವ ಪ್ರಕರಣಗಳು ಎಷ್ಟು ; ಮತ್ತು ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಭೂ ಪರಿವರ್ತನೆ ಆದೇಶ

**ಶ್ರೀ ಪಾಟೀಲ್ ಬಿ.ಆರ್. (ಆಳಂದ)–**

೧೪೭ (೨೧೩೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ಇದರ ನ್ಯಾಯಾಲಯದ ಅಪೀಲು ಸಂಖ್ಯೆ ೧೬೪/೨೦೧೫ (ಕಂದಾಯ)ರ ಆದೇಶದಂತೆ ವರ್ತೂರು ಗ್ರಾಮದ ಸರ್ವೆ ನಂ. ೩೦/೧ಎ ಜಮೀನಿನ ಭೂ ಪರಿವರ್ತನೆ ಆದೇಶ ನೀಡುವ ಬಗ್ಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯವು ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಬೆಂಗಳೂರು ಪೂರ್ವ ತಾಲ್ಲೂಕು ತಹಶೀಲ್ದಾರರ ಮೇಲೆ ಜರುಗಿಸುವ ಕ್ರಮಗಳೇನು ;

(ಇ) KAT ಆದೇಶದಂತೆ ನಿಗದಿತ ಶುಲ್ಕ ಪಾವತಿಸಿಕೊಂಡು ಭೂ ಪರಿವರ್ತನೆ ಆದೇಶವನ್ನು ಯಾವಾಗ ನೀಡಲಾಗುವುದು ? (ವಿವರ ನೀಡುವುದು)

## ಮರು ಭೂಮಾಪನದ ವಿಳಂಬ

**ಶ್ರೀ ಸಂಜಯ್ .ಬಿ. ಪಾಟೀಲ್ (ಬೆಳಗಾಂ ಗ್ರಾಮಾಂತರ)–**

೧೪೮ (೨೧೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಗ್ರಾಮೀಣ ಮತ ಕ್ಷೇತ್ರದಲ್ಲಿ ಹತ್ತು ಹಳ್ಳಿಗಳನ್ನು ಮರು ಭೂಮಾಪನ ಮಾಡಿದ್ದು, ರೈತರ ಜಮೀನಿನ ಉತಾರಗಳನ್ನು ಇಲ್ಲಿಯವರೆಗೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ವಿಳಂಬ ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ;

(ಇ) ಕೆಲವೊಂದು ಗ್ರಾಮಗಳಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲಾಗಿದ್ದು, ಆದರೆ ಭೂಮಾಪಕರ ಕೊರತೆಯಿಂದ ಸರ್ವೆ ಕಾರ್ಯ ಅರ್ಧಕ್ಕೆ ನಿಂತಿರುವುದು ನಿಜವಲ್ಲವೇ ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಕಾಡ್ಗಿಚ್ಚು ನಿಯಂತ್ರಣ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)–**

೧೪೯ (೬೬೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಾಡಿನಂಚಿನ ಭಾಗಗಳಲ್ಲಿ (ಬಂಡೀಪುರ, ನಾಗರಹೊಳೆ ಸೇರಿದಂತೆ) ಅತಿಯಾದ ಕಾಡ್ಗಿಚ್ಚು ಕೆಲವೊಮ್ಮೆ ಮಾನವ ನಿರ್ಮಿತ ಕಿಚ್ಚಾಗಿ ಮಾರ್ಪಟ್ಟಿರುವ ನಿದರ್ಶನಗಳು ಕಂಡುಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; ಕಾಡಿಗೆ ಬೆಂಕಿ ಹಚ್ಚುವುದರಿಂದ ಆ ಭಾಗದ ಜನರಿಗೆ ಆಗುವ ಪ್ರಯೋಜನಗಳೇನು ;

(ಇ) ಈ ರೀತಿಯ ಕಾಡ್ಗಿಚ್ಚು ಬೆಂಕಿಯಿಂದ ವರ್ಷಕ್ಕೆ ನಾಶವಾಗುವ ಅರಣ್ಯ ಸಂಪತ್ತು ಎಷ್ಟು ; ಇದು ಉದ್ದೇಶಪೂರ್ವಕ ಘಟನೆಯೇ ಅಥವಾ ಆಕಸ್ಮಿಕ ಘಟನೆಯೇ ;

(ಈ) ಈ ಬಗ್ಗೆ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ವಿಚಾರಣೆ ಕೈಗೊಂಡಿರುವರೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಉ) ಮಾನವ ನಿರ್ಮಿತವೆಂದು ತಿಳಿದ ಮೇಲೆ ಅಂತಹವರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ; (ವಿವರ ನೀಡುವುದು)

(ಊ) ಈ ನಿಟ್ಟಿನಲ್ಲಿ ಶಾಶ್ವತ ಪರಿಹಾರೋಪಾಯಗಳನ್ನು ಗುರುತಿಸಲು ಸರ್ಕಾರಕ್ಕಿರುವ ತೊಂದರೆಗಳೇನು ? (ಮಾಹಿತಿ ನೀಡುವುದು)

## ಜಲಾಶಯದ ಆಧುನೀಕರಣ

**ಶ್ರೀ ನಾಗರಾಜಯ್ಯ ಡಿ. (ಕುಣಿಗಲ್)–**

೧೫೦ (೯೪೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಾರ್ಕೋನಹಳ್ಳಿ ಜಲಾಶಯದ ವಿಸ್ತೀರ್ಣವೆಷ್ಟು ;

(ಆ) ಮಾರ್ಕೋನಹಳ್ಳಿ ಜಲಾಶಯವು ನಿರ್ಮಾಣಗೊಂಡಾಗಿನಿಂದ ಇಲ್ಲಿಯವರೆವಿಗೂ ಜಲಾಶಯದ ಆಧುನೀಕರಣಕ್ಕಾಗಿ ಸರ್ಕಾರವು ಬಿಡುಗಡೆ ಮಾಡಿದ ಅನುದಾನವೆಷ್ಟು ;

(ಇ) ಜಲಾಶಯದ ವಿತರಣಾ ನಾಲೆಗಳ ಬಿರುಕಿನಿಂದಾಗಿ ಜಲಾಶಯದ ನೀರು ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ತುರ್ತಾಗಿ ಈ ಜಲಾಶಯದ ವಿತರಣಾ ನಾಲೆಗಳನ್ನು ಆಧುನೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 366-2000 ಪ್ರತಿಗಳು (ಪಿ2)

*List of Questions for Oral Answers*

*Total No. of Questions - 15*

# *LIST - 10*

# *KARNATAKA LEGISLATIVE ASSEMBLY*

## *FOURTHEENTH ASSEMBLY*

## *TENTH SESSION*

## *Monday, the 18th July, 2016*

---

### *GROUP - A*

1. Minister for Forest
2. Minister for Revenue
3. Minister for Major and Medium Irrigation.
4. Minister for Law, Parliamentary Affairs and Minor Irrigation
5. Minister for Labour
6. Minister of State for Textiles and Muzrai
7. Minister of State for Empowerment of Youth, Sports and Fisheries

---

### *NABARD SCHEME*

***Sri Guru Patil Shiraval (Shahapur) -***

136 (337) Will the Minister for Law, Parliamentary Affairs and Minor Irrigation be pleased to state:-

a) the quantum of amount earmarked, released and spent by the Government under the NABARD Scheme from the last three years to end of June 2016 ; (districtwise details be given)

b) the various schemes proposed to undertake by the Minor Irrigation Department under this scheme during the above said period ; (yearwise and talukwise details be furnished)

c) the measures taken by the Government to undertake the works in the taluks where the works have not been undertaken?

### *CENTRAL GOVERNMENT GRANT*

***Sri Ramesh Bandisiddegowda A.B (Srirangapatna) -***

137 (959) Will the Minister for Forest be pleased to state:-

a) the quantum of grant allocated by the Central Government to the Forest and Environment Department since last three years ; (the yearwise and schemewise complete details of the grant allocated be furnished)

b) the various schemes that have been evolved out of this grant during the last 3 years; the quantum of grant spent for these schemes ; (schemewise, districtwise and constituencywise complete details of the grant allocated be furnished)

c) out of these schemes, the number of schemes completed; the number of schemes failed; the reasons for failure of said schemes ? (complete details be given)

### *DISTRICT OFFICES COMPLEX*

***Sri Jarakiholi Satish Lakshmanrao (Yamakanmardi) -***

138 (1200) Will the Minister for Revenue be pleased to state:-

a) whether there is any proposal before the Government to set up all the district offices of Belgaum district in the premise of Deputy Commissioner Office;

b) if so, the present stage of the said proposal; the quantum of grant and the period of time required to complete the building complex ? (information be furnished)

## *GOVERNMENT LANDS*

***Sri Aravind Limbavali (Mahadevapura)*** -

139 (2148) Will the Minister for Revenue be pleased to state:-

a) whether the Government lands in the limits of Mahadevapura Assembly Constituency have been identified;

b) if so, the particulars of the lands encroached ; (details be given)

c) the action taken by the Government to evict this encroachment ? (details on eviction of encroached land be given)

## *79 AB CASES*

***Dr. K.Srinivasamurthy (Nelamangala)*** -

140 (2325) Will the Minister for Revenue be pleased to state:-

a) the number of 79 AB cases which have been registered in the office of Assistant Commissioner, Doddaballapur in respect of Nelamangala Assembly Constituency during the years 2014-15 and 2015-16; out of them, the number of cases settled;

b) the number of 79 AB cases registered during the current year; out of which, the number of unsettled pending cases;

c) the number of Bagar Hukum cultivator beneficiaries in this constituency; the number of meetings held with regard to Bagar Hukum cultivation during the last three years; the number of beneficiaries to whom the land has been granted in this meeting ; (details be given)

d) the number of 79 AB cases which have been registered by Nelamangala taluk office; out of them, the number of cases settled and the number of cases remained pending during the last three years ? (details be furnished)

## *PENDING OF GRANT SANCTIONED FOR TEMPLES*

***Sri Narendra Swamy P.M (Malavalli) -***

141 (1212) Will the Minister of State for Textiles and Muzrai be pleased to state:-

a) whether the Government is aware of the fact that Rs.150.00 lakhs of special grant has been sanctioned by the Government for the development of various temples of Malavalli taluk during the last 3 years;

b) out of the grant sanctioned, the quantum of grant released so far; whether this grant has been fully utilized for the works; whether the works have been fully completed; (details be furnished)

c) whether the Government is aware of the fact that even though the works have been fully completed, the balance grant has not been released so far; if so, the reasons for not releasing the grant;

d) whether there is any proposal before the Government in respect of releasing the pending grant; the present stage of this proposal; whether the Government is committed to release the pending grant?

## *CONSTRUCTION OF MINI VIDHANA SOUDHA*

***Smt. Sharada Mohan Shetty (Kumta) -***

142 (2151) Will the Minister for Revenue be pleased to state:-

a) whether the Government is aware of the fact that the building of Mini Vidhana Soudha has been sanctioned in Kumta of Kumta taluk, but no progress has been achieved due to non-release of grant;

b) if so, the reason for not releasing the grant; the time by when the grant would be released;

c) what type of action has been taken to get alienated the land which is required for building to the department? (details be furnished)

## *CONSTRUCTION OF MINI VIDHANA SOUDHA*

***Sri Nagendra B. (Kudligi) -***

143 (2339) Will the Minister for Revenue be pleased to state:-

a) the quantum of grant sanctioned for the construction of Mini Vidhana Soudha building since the last 3 years in the State ; (talukwise and yearwise details be furnished)

b) whether there is any proposal before the Government to construct Mini Vidhana Soudha in Kudligi; if so, the present stage of the proposal ; (details be furnished)

c) whether the grant has been sanctioned to construct Mini Vidhana Soudha in Kudligi during the current year; if not, the reasons therefor ? (details be furnished)

## *THE FOREST RIGHTS ACT*

***Sri Ningaiah B.B (Mudigere) -***

144 (1170) Will the Minister for Forest be pleased to state:-

a) the number of applications received by the Forest Right Committees so far seeking land grant under the Forest Rights Act in the State ; (districtwise details be furnished)

b) out of them, the number of tribles (Girijanas) and other forest dwellers to whom title deeds have been issued under the Forest Rights Act so far ; (districtwise and talukwise information be furnished)

c) the numbers of application remained pending for disposal in the State? (districtwise and talukwise details be furnished)

## *MEDICAL FACILITY*

***Sri Subbareddy S.N (Bagepalli) -***

145 (953) Will the Minister for Labours be pleased to state:-

a) whether an order has been issued to avail medical facility under E.S.I. scheme by the Private Education Institutions of the State; if so, the time by when the order has been issued ; (order copy be furnished)

b) the number of Education Institutions registered with the Government to avail medical facility under the said scheme so far; the names of them ; (complete details be furnished)

c) the names of Education Institutions which have not registered with the Government in this regard ? (information be furnished)

### *BAN OF PLASTIC*

***Sri Narayana Swamy Y.A (Hebbal) -***

146 (1849) Will the Minister for Forest be pleased to state:-

a) whether the plastic ban is in force in the State; if so, the date from which it was enforced ; (copy of the order be furnished)

b) the measures taken by the Government to make the ban of plastic compulsory;

c) the number of cases lodged against the persons who breached the plastic ban order so far; and the measures taken by Government in this regard ? (details be given)

### *LAND CONVERSION ORDER*

***Sri Patil B.R (Alanda) -***

147 (2139) Will the Minister for Revenue be pleased to state:-

a) whether it has come to the notice of the Government that the office of Deputy Commissioner is resorting a delay tactics on issue of land conversion order for the land in survey No.30/1A of Varthur village as per the order of the Karnataka Appellate Tribunal, Bengaluru passed in connection with Appeal No: 164/2015 ; (Revenue)

b) if so, the actions that would be initiated against the Tahsildar, Bengaluru East taluk in this regard;

c) the time by when the land conversion order would be issued by receiving the payment of prescribed fee as per KAT order ? (details be given)

### *DELAY IN RE-SURVEY OF LAND*

***Sri Sanjay B. Patil (Belguam Rural) -***

148 (2137) Will the Minister for Revenue be pleased to state:-

a) whether it has come to the notice of the Government that since the re-survey of land has been conducted in ten villages coming under the limits of Belguam Rural Assembly Constituency, the extracts of land record (utaar) have not been issued to the farmers so far;

b) if so, the measures taken to avoid the delay;

c) whether it is a fact that the land re-survey work has been conducted in the several villages, but the survey work is stopped half way due to shortage of land surveyor; the measures taken by the Government in this regard ?

### *CONTROL OF FOREST FIRE*

***Sri Vishweshwara Hegde Kageri (Sirsi) -***

149 (662) Will the Minister for Forest be pleased to state:-

a) whether some instances found that sometimes extensive forest fire was converted into man-made fire in border areas of the forest (including Bandipura Nagarhole) in the State;

b) if so, the reasons therefor; the measures taken by the Government to prevent the forest fire; the benefits that would be availed by the people of that areas due to set fire to the forest;

c) the extent of forest resource that would be destroyed annually because of such forest fire; whether it is an intentional or accidental;

d) whether the departmental officers have taken up the matter for enquiry after conducting spot inspection in this regard; if not, the reasons therefor;

e) after knowing that it is a man-made act, what action has been taken by the Government against such persons ; (details be given)

f) the hurdles of the Government to find out permanent remedies in this regard ? (information be furnish)

### *MODERNISATION OF RESERVOIR*

***Sri Nagarajaiah D. (Kunigal) -***

150 (945) Will the Minister for Major and Medium Irrigation be pleased to state:-

a) the extent of Markonahalli reservoir coming under the limits of Kunigal Assembly Constituency;

b) the quantum of grant released by the Government for the modernization of Markonahalli reservoir from the date of completion of the construction work of said reservoir to till date;

c) whether it has come to notice of the Government that the reservoir water is being waste due to cracks developed in the distributaries of the said reservoir;

d) if so, whether the Government would take steps to modernize the distributaries of this reservoir immediately? (complete information be given)

***S. Murthy***
Secretary(I/c)
Karnataka Legislative Assembly

Government Press, Vikasa Soudha Unit, Bengaluru - WD-366-1500 Copies - P2